

# ಹುಡುಗೀರೇ ನಂಬರ್ ಕೇಳ್ತೋದು

## ಮಹೇಶ್ ಭಟ್

ಉದಯದ 'ನೇತ್ರಾವತಿ'ಯ ಸಮುದ್ರ

◆ **ನಿಮ್ಮ ಪರಿಚಯ ಹೇಳಿ.**

ಉತ್ತರ ಕನ್ನಡದ ಯಲ್ಲಾಪುರ ತಾಲ್ಲೂಕಿನ ಮಾಗೋಡು ನನ್ನೂರು. ಸಂಸ್ಕೃತ, ವೇದ ಮತ್ತು ಜ್ಯೋತಿಷ್ಯವನ್ನು ಅಧ್ಯಯನ ಮಾಡಿದ್ದೇನೆ. ನಟನೆಯ ಗೀಳು ಇರುವುದರಿಂದ ಬೆಂಗಳೂರಿಗೆ ಬಂದು ನಟನೆಯನ್ನು ಕಲಿಯಲು ಆರಂಭಿಸಿದೆ. ಅದೇ ವೇಳೆಗೆ ಆಡಿಷನ್ ನೀಡಲು ಆರಂಭಿಸಿದೆ. ಸಣ್ಣ ಪುಟ್ಟ ಪಾತ್ರಗಳ ಮೂಲಕ ಪ್ರಧಾನ ಪಾತ್ರವನ್ನು ನಿರ್ವಹಿಸುವ ಮಟ್ಟಿಗೆ ಕಿರುತೆರೆಯಲ್ಲಿ ಬೆಳೆದಿದ್ದೇನೆ.

◆ **ಜ್ಯೋತಿಷಿ ಆಗಬೇಕಿದ್ದ ನೀವು ನಟನೆಯ ಪ್ರೀತಿ ಬೆಳೆಸಿಕೊಂಡಿದ್ದು ಹೇಗೆ?**

ಮೊದಲಿನಿಂದಲೂ ನಟನೆಯ ಕನಸು ನನಗಿತ್ತು. ಅದನ್ನು ಆಗು ಮಾಡಿಕೊಳ್ಳುವ ವಾತಾವರಣ ನನಗೆ ಇರಲಿಲ್ಲ. ಚಿಕ್ಕ ವಯಸ್ಸಿನಲ್ಲಿ ನನ್ನ ನಟನೆಯ ಗೀಳಿಗೆ ಆರೈಕೆ ಸಮರ್ಪಕವಾಗಿ ಸಿಗಲಿಲ್ಲ. ಹೀಗಿರುವಾಗ 2014–15ರ ಸುಮಾರಿಗೆ ಯಾರಿಗೂ ಹೇಳದೆ ಕೇಳದೆ ಬೆಂಗಳೂರಿಗೆ ಬಂದೆ. ಒಂದೆರಡು ಧಾರಾವಾಹಿಯ ಶೂಟಿಂಗ್ ಸೆಟ್‌ಗೆ ಭೇಟಿ ನೀಡಿದೆ. ಅವಕಾಶ ಕೇಳಿದೆ, ಅದು ಸಿಗುವ ಸ್ಥಿತಿಯಲ್ಲಿ ಇರಲಿಲ್ಲ. ಹಾಗೆಂದು ನನ್ನ ಪ್ರಯತ್ನವನ್ನು ಬಿಡಲಿಲ್ಲ. ಅಷ್ಟರಲ್ಲಿ ನನ್ನ ಆಸೆಗೆ ಮನೆಯವರ ಪ್ರೋತ್ಸಾಹ ಕೂಡ ಸಿಕ್ಕಿತು.

◆ **ಬಣ್ಣದ ಜಗತ್ತು ಪ್ರವೇಶಿಸಿದಾಗ ಅನುಭವಿಸಿದ ಕಷ್ಟ ಸುಖಗಳೇನು?**

ನಟನೆಯನ್ನು ಕಲಿಯಲು ಬೆಂಗಳೂರಿಗೆ ಬಂದಾಗ ವಸತಿಯ ದೊಡ್ಡ ಸಮಸ್ಯೆ ಎದುರಾಯಿತು. ಊಟಕ್ಕೆ ಸಿಕ್ಕಾಪಟ್ಟೆ ಕಷ್ಟ ಆಗ್ತಾ ಇತ್ತು. ನಟನೆಗೆ ಅವಕಾಶ ಸಿಗುವ ಸ್ಥಿತಿ ಇರಲಿಲ್ಲ. ನಿರಂತರವಾಗಿ ಫೇಸ್‌ಬುಕ್ ಖಾತೆಯಲ್ಲಿ ನಿರ್ದೇಶಕರು–ನಟರಿಗೆ ಸಂದೇಶವನ್ನು ಕಳಿಸುತ್ತಿದ್ದೆ. ಅದಾವುದೂ ಕೆಲಸಕ್ಕೆ ಬರ್ತಾ ಇರಲಿಲ್ಲ. ಫೇಸ್‌ಬುಕ್‌ನಲ್ಲಿ ಆಡಿಷನ್ ವಿಷಯಗಳು ಗೊತ್ತಾಗುತ್ತಿದ್ದವು. ಅದನ್ನು ನೋಡಿ ಆಡಿಷನ್ ಕೊಡುತ್ತಿದ್ದೆ. ಸುಮಾರು 35 ಆಡಿಷನ್ ಕೊಟ್ಟಿರಬಹುದು. ಒಂದೂ ಪ್ರಯೋಜನಕ್ಕೆ ಬರಲೇ ಇಲ್ಲ. ಕೆಲವರು ಸಿನಿಮಾಕ್ಕೆ ಹೂಡಿಕೆ ಮಾಡಲು ಕೇಳಿದರು. ಅದರ ಸಹವಾಸವೇ ಬೇಡ ಎಂದು ಸೀರಿಯಲ್ ಮಾತ್ರ ಮಾಡೋಣ ಎಂದು ತೀರ್ಮಾನಿಸಿದೆ. ಹೀಗೆ ನಿರ್ಧರಿಸಿದ ನಂತರ ನನಗೆ ಮೊದಲ ಅವಕಾಶ 'ಶಾಂತಂ ಪಾಪಂ'ನಲ್ಲಿ ಒಂದೆರಡು ಕಂತಿನ ದೃಶ್ಯಗಳಲ್ಲಿ ಕಾಣಿಸಿಕೊಂಡೆ. ಅದರಿಂದ ಸಂಪರ್ಕ ಸಾಧಿಸಲು ಸಾಧ್ಯವಾಯಿತು. ಯಾವುದಾದರೂ ಒಂದೆರಡು ದೃಶ್ಯದಲ್ಲಿ ನಟಿಸಲು ಕರೆಯುತ್ತಿದ್ದರು. ಅದರಲ್ಲಿ ಒಂದೆರಡು ಡೈಲಾಗ್ ಇರುತ್ತಿದ್ದವು. ಅಂತಹ ಪುಟ್ಟ ಅವಕಾಶಗಳನ್ನು ಮಾಡುವುದರಲ್ಲೇ ವರ್ಷ ಕಳೆದೆ. ಸಣ್ಣಪುಟ್ಟ ಪಾತ್ರಗಳಿಗೆ ನನ್ನ ಸಮಯ ಕೊಡಬಾರದು ಎಂದು ಆಗ ಅನ್ನಿಸಿತು. ತಿಂಗಳಲ್ಲಿ ಒಂದೆರಡು ದಿನ ನಟಿಸುವುದರಿಂದ ಹೇಳುವ ಸಂಭಾವನೆ ಸಿಗ್ತಾ ಇರಲಿಲ್ಲ. ಮನೆಯಿಂದ ಸಹಕಾರ ಇರುವುದರಿಂದ ಬೆಂಗಳೂರಿನಲ್ಲಿ ನೆಲೆಸಲು ಸಾಧ್ಯ ಆಯ್ತು. ಅಷ್ಟರಲ್ಲಿ ಕೊರೊನಾ ಬಂತು.

◆ **ಸಮುದ್ರ ಪಾತ್ರ ಹೇಗಿದೆ?**

ಇದು ನನಗೆ ಸಿಗುತ್ತದೆ ಎಂದು ಅಂದುಕೊಂಡಿರಲಿಲ್ಲ. ನನ್ನ ಗೆಳತಿ ಇದೇ ಸೀರಿಯಲ್‌ನಲ್ಲಿ ನಟಿಸುತ್ತಿದ್ದಾರೆ. ಅವರು ಕರೆದರು ಅಂತ ಆಡಿಷನ್ ನೀಡಲು ಹೋದೆ. ಲುಕ್ ಟೆಸ್ಟ್ ಕೊಟ್ಟೆ, ಆಯ್ಕೆ ಮಾಡಿಕೊಂಡರು. ನಾಯಕ ಪಾತ್ರ ಸಿಕ್ಕಿದ್ದಕ್ಕೆ ಖುಷಿ ಆಯ್ತು. ಇದು ರಿಪ್ಲೇಸ್‌ಮೆಂಟ್ ಪಾತ್ರ ಆಗಿದ್ದರಿಂದ ಸ್ವಲ್ಪ ಕಷ್ಟ ಆಗುತ್ತಿತ್ತು. ಮೊದಲು ಈ ಪಾತ್ರ ಮಾಡುತ್ತಿದ್ದವರು ಆರೋಗ್ಯ ಸಮಸ್ಯೆಯಿಂದ ಬಿಟ್ಟಿದ್ದರು. ಅವರು ಆ ಪಾತ್ರವನ್ನು ಕಟ್ಟಿದ್ದರು. ಅದನ್ನು ಮುಂದುವರಿಸುವುದು ನನಗೆ ದೊಡ್ಡ ಸವಾಲಾಗಿತ್ತು. ನನ್ನನ್ನು ಜನ ಒಪ್ಪಿಕೊಳ್ಳುತ್ತಾರೋ ಇಲ್ಲವೋ ಎನ್ನುವ ಅಳುಕಿನಲ್ಲಿಯೇ ಮುನ್ನುಗ್ಗಿದ್ದೇನೆ.

◆ **ಜ್ಯೋತಿಷ್ಯವನ್ನು ಮುಂದುವರಿಸುವ ಬಗ್ಗೆ ಏನೆಂದುಕೊಂಡಿದ್ದೀರಿ?**

ಇತ್ತೀಚೆಗೆ ಸಿನಿಮಾಕ್ಕೂ ಅವಕಾಶಗಳು ಬಂದಿತ್ತು. ಇದರಲ್ಲಿ ಬಿಜಿ ಇರುವುದರಿಂದ ನಾನು ಒಪ್ಪಿಲ್ಲ. ಈಗಲೇ ಸಿನಿಮಾ ಬೇಕಿಲ್ಲ ಎಂದುಕೊಂಡಿದ್ದೇನೆ. ಬಣ್ಣದ ಲೋಕದಲ್ಲಿ ಇನ್ನೊಂದಿಷ್ಟು ಬೆಳೆಯಬೇಕು. ಅಭಿನಯ ಕ್ಷೇತ್ರದ ಭವಿಷ್ಯ ಹೀಗೆ ಇರುತ್ತದೆ ಎಂದು ನಿರ್ಧರಿಸಲು ಆಗುವುದಿಲ್ಲ. ಇದು ಕೈ ಹಿಡಿದಷ್ಟು ದಿನ ಇದ್ದೇ ಇರುತ್ತೇನೆ. ಆಗುವುದಿಲ್ಲ ಎನ್ನುವುದು ಖಚಿತವಾದರೆ ಜ್ಯೋತಿಷ್ಯವನ್ನು ಮುಂದುವರಿಸಬಹುದು. ಸದ್ಯ ನಾನು ಅದನ್ನು ಮಾಡುತ್ತಿಲ್ಲ. ಸ್ವತಃ ಜ್ಯೋತಿಷ್ಯವನ್ನು ಕೇಳಿಕೊಂಡೆ ಇಲ್ಲಿಗೆ ಬಂದಿದ್ದೇನೆ. ಇಲ್ಲಿ ಒಳ್ಳೆಯ ಭವಿಷ್ಯ ಇದೆ ಎನ್ನುವ ಶುಭ ಸೂಚನೆ ಇದ್ದಿದ್ದರಿಂದಲೇ ಮಾಡುತ್ತೇನೆ. ನಾನು ಈಗ ಜ್ಯೋತಿಷ್ಯ ಹೇಳುವುದಿಲ್ಲ.

◆ **ಸಾಮಾಜಿಕ ಮಾಧ್ಯಮಗಳ ನಿರ್ವಹಣೆಯನ್ನು ಹೇಗೆ ಮಾಡುತ್ತಿದ್ದೀರಿ?**

ಫೇಸ್‌ಬುಕ್ ಹೆಚ್ಚು ಬಳಸುತ್ತೇನೆ. ಬಿಡುವಿನ ವೇಳೆ ಸಾಮಾನ್ಯವಾಗಿ ಕ್ರಿಯಾಶೀಲವಾಗಿ ಇದ್ದೇ ಇರುತ್ತೇನೆ. ಏನೇ ಕಾಮೆಂಟ್ ಮಾಡಿದರೂ ಉತ್ತರಿಸುತ್ತೇನೆ. ಕೆಲವೊಬ್ಬರು ಫೋನ್ ನಂಬರ್ ಕೇಳುತ್ತಾರೆ. ನಂಬರ್ ಷೇರ್ ಮಾಡುವುದಿಲ್ಲ. ಆರಂಭದಲ್ಲಿ ನೆಗೆಟಿವ್ ಕಾಮೆಂಟ್ ಬರ್ತಾ ಇದ್ದವು. ಅದನ್ನು ತಲೆಗೆ ಹಚ್ಚಿಕೊಳ್ಳಬೇಡ ಎಂದು ನನ್ನ ಸಹನಟರು ಸಮಾಧಾನ ಮಾಡುತ್ತಿದ್ದರು. ಹೋಗ್ತಾ ಹೋಗ್ತಾ ಸರಿ ಹೋಯ್ತು. ವೀಕ್ಷಕರೂ ಅಲ್ಲಿ ಕೆಲವೊಂದು ಸಲಹೆಯನ್ನು ನೀಡುತ್ತಾರೆ. ಉತ್ತಮ ಎನಿಸಿದ್ದನ್ನು ನಾನೂ ತೆಗೆದುಕೊಳ್ಳುತ್ತೇನೆ. ಇತ್ತೀಚೆಗೆ ಇನ್‌ಸ್ಟಾಗ್ರಾಮ್‌ನಲ್ಲಿ ಇದ್ದೇನೆ. ಸಾಮಾಜಿಕ ಮಾಧ್ಯಮದ ನನ್ನ ಖಾತೆಯಲ್ಲಿ ಹುಡುಗಿಯರೇ ಹೆಚ್ಚು ಪ್ರತಿಕ್ರಿಯಿಸುವುದು ವಿಶೇಷ.

■ **ರಾಘವೇಂದ್ರ ಕೆ.**